**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.54/2020**

ಪ್ರಾ.ಸಾ. 11

ಚಾ.ಸಾ. 13

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.01.2026**

| | |
|---|---|
| ಸಾಕ್ಷಿದಾರರ ಹೆಸರು | ಹನುಮಂತಯ್ಯ |
| ತಂದೆಯ ಹೆಸರು | ದಾಸಯ್ಯ |
| ವಯಸ್ಸು | 61 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಹನಕೆರೆ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನನ್ನ ಮನೆ ಹನಕೆರೆಯಲ್ಲಿದೆ. ಅದು ಹೆಂಚಿನ ಮನೆ. ನ್ಯಾಯಾಲಯದ ಮುಂದೆ ಇರುವ 1 ರಿಂದ 6 ನೇ ಆರೋಪಿಗಳ ಪೈಕಿ ಯಾರನ್ನೂ ನೋಡಿಲ್ಲ. ನಾನು 1 ಮತ್ತು 5 ನೇ ಆರೋಪಿಗಳನ್ನು ಈ ಹಿಂದೆ ಎಲ್ಲಿಯೂ ನೋಡಿಲ್ಲ. ನಾನು ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ನಿಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಹನಕೆರೆಯ ನಮ್ಮ ಮನೆಯ ಹಿಂಭಾಗದಲ್ಲಿ ಹಾಕಿದ್ದೇನೆ. ಅಲ್ಲಿಗೆ ಪೊಲೀಸರು ಬಂದಿದ್ದರು. ಪೊಲೀಸರ ಜೊತೆ ಬೇರೆಯವರು ಬಂದಿದ್ದರು. ಪೊಲೀಸರ ಜೊತೆ ಯಾವ ಆರೋಪಿಗಳು ಬಂದಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪೊಲೀಸರು ಮನೆಯ ಹಿಂಭಾಗ ಚೀಲದಿಂದ ವಸ್ತುಗಳನ್ನು ಪಡೆದರು. ಮನೆಯ ಹಿಂಭಾಗ ಬಾತ್ ರೂಮ್ ಬಳಿ ಗೋಣಿಚೀಲದಲ್ಲಿ ವಸ್ತುಗಳು ಇದ್ದವು. ಅಲ್ಲಿ ದೊಣ್ಣೆಗಳು ಇದ್ದವು. ಪೊಲೀಸರು ಅಲ್ಲಿಗೆ ಬಂದಿದ್ದಾಗ ಫೊಟೋ ಕೂಡ ತೆಗೆದಿದ್ದಾರೆ. ಏನು ವಸ್ತುಗಳನ್ನು ತೆಗೆದುಕೊಂಡರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಈ ಹಂತದಲ್ಲಿ ಪಿಎಫ್ ನಂ.71/2019 ರಲ್ಲಿ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ನಮೂದಿಸಿರುವ ಬಿಳಿ ಬಟ್ಟೆಯ

ಚೀಲದಲ್ಲಿ ಸುತ್ತಿ ಮೊಹರು ಮಾಡಿದ ಒಂದು ಹಿಡಿಕೆ ಇಲ್ಲದೆ ಇರುವ ಒಂದು ಲಾಂಗನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಹಿಂದೆ ನೋಡಿಲ್ಲ ಎಂದು ನುಡಿಯುತ್ತಾರೆ. ಅದನ್ನು ಗುರುತಿಸುವ ಸಲುವಾಗಿ ಮು.ಮಾ.6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಬಿಳಿ ಬಟ್ಟೆಯ ಚೀಲದಲ್ಲಿ ಸುತ್ತಿ ಮೊಹರು ಮಾಡಿದ ಒಂದು ಡ್ರ್ಯಾಗರ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಹಿಂದೆ ನೋಡಿಲ್ಲ ಎಂದು ನುಡಿಯುತ್ತಾರೆ. ಅದನ್ನು ಗುರುತಿಸುವ ಸಲುವಾಗಿ ಮು.ಮಾ.7 ಎಂದು ಗುರುತಿಸಲಾಯಿತು. ಪೊಲೀಸರು ನಮ್ಮ ಮನೆಯ ಬಳಿ ಬಂದಾಗ ಸಮಯ ಬೆಳಗ್ಗೆ 11.00 ಗಂಟೆಯಾಗಿತ್ತು. ನಾನು ಈಗ ನೋಡುತ್ತಿರುವ ಫೊಟೋದಲ್ಲಿ ನಾನು ಇದ್ದೇನೆ. ಸಾಕ್ಷಿ ಗುರುತಿಸಿದ ಸದರಿ ಫೊಟೋವನ್ನು ನಿಪಿ.20 ಎಂದು ಗುರುತಿಸಲಾಯಿತು. ನಿಪಿ.20 ಫೊಟೋವನ್ನು ನಮ್ಮ ಮನೆಯ ಹಿಂಭಾಗದಲ್ಲಿ ತೆಗೆದಿರುತ್ತಾರೆ. ಸಾಕ್ಷಿಗೆ ಇತರೆ 5 ಫೊಟೋಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಅವುಗಳನ್ನೂ ಕೂಡ ನಮ್ಮ ಮನೆಯ ಹಿಂಭಾಗದಲ್ಲಿ ತೆಗೆದಿರುತ್ತಾರೆ. ಎಂದು ನುಡಿದು ಗುರುತಿಸಿರುತ್ತಾರೆ. ಆ ಫೊಟೋಗಳನ್ನು ಕ್ರಮವಾಗಿ ನಿಪಿ.21 ರಿಂದ ನಿಪಿ.25 ಎಂದು ಗುರುತಿಸಲಾಯಿತು. ನಿಪಿ.20 ರಿಂದ ನಿಪಿ.25 ಫೊಟೋಗಳಲ್ಲಿ 1 ಮತ್ತು 5 ನೇ ಆರೋಪಿಗಳು ಕಾಣುತ್ತಿದ್ದಾರೆ. ನಿಪಿ.21 ರಲ್ಲಿ 1 ನೇ ಆರೋಪಿ ಲಾಂಗ್ ಅನ್ನು ಹಿಡಿದುಕೊಂಡಿರುವುದು ಕಾಣುತ್ತಿದೆ. ನಿಪಿ.20 ರಲ್ಲಿ 5 ನೇ ಆರೋಪಿ ಡ್ರ್ಯಾ ಗರ್ ಅನ್ನು ಹಿಡಿದುಕೊಂಡಿರುವುದು ಕಾಣುತ್ತಿದೆ. ಪೊಲೀಸರು 1 ಮತ್ತು 5 ನೇ ಆರೋಪಿಗಳನ್ನು ನಮ್ಮ ಮನೆಯ ಬಳಿ ಯಾಕೆ ಕರೆದುಕೊಂಡು ಬಂದಿದ್ದರು ಎಂದು ಗೊತ್ತಿಲ್ಲ. ನಾನು ಸಹಿ ಹಾಕಿದ ಮಹಜರಿನಲ್ಲಿ ಏನು ಬರೆದಿದ್ದಾರೆಂದು ವಿಚಾರ ಗೊತ್ತಿಲ್ಲ. ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿಲ್ಲ. ಈ ವಿಚಾರ ಬಿಟ್ಟು ನನಗೆ ಬೇರೆ ವಿಚಾರ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ 08.07.2019 ರಂದು ನಾನು ಹೇಳಿಕೆ ನೀಡಿ ಪ್ರಕರಣದ 1 ನೇ ಆರೋಪಿ ವಡ್ಡರದೊಡ್ಡಿ ಗ್ರಾಮದವನು ಆಗಿದ್ದು, ನನಗೆ ಪರಿಚಯ ಎಂದು ಹೇಳಿದ್ದೇನೆಂದರೆ ಸರಿಯಲ್ಲ. ದಿನಾಂಕ 08.07.2019 ರಂದು ಬೆಳಗ್ಗೆ 11.45 ಗಂಟೆ ಸಮಯಕ್ಕೆ ಪೊಲೀಸರು 1 ಮತ್ತು 5 ನೇ ಆರೋಪಿಯನ್ನು ನಮ್ಮ ಮನೆಯ ಬಳಿ ಕರೆದುಕೊಂಡು ಬಂದಿದ್ದರು, ಆಗ 1 ಮತ್ತು 5 ನೇ ಆರೋಪಿಗಳು ಈ ಹಿಂದೆ ಕೃತ್ಯಕ್ಕೆ ಬಳಸಿದ್ದು ಎಂದು ಹೇಳಿ ನಮ್ಮ ಮನೆಯ ಮುಂಭಾಗದಲ್ಲಿರುವ ಬಾತ್ ರೂಮ್ ಬಳಿ ಕರೆದುಕೊಂಡು ಹೋಗಿ ಬಾತ್ ರೂಮಿನ ಮೇಲ್ಭಾಗದಲ್ಲಿ ಇಟ್ಟಿದ್ದ ಮು.ಮಾ.6 ಮತ್ತು ಮು.ಮಾ.7 ರಲ್ಲಿ 1 ನೇ ಆರೋಪಿ ಮು.ಮಾ.6 ಲಾಂಗನ್ನು ಮತ್ತು 5 ನೇ ಆರೋಪಿ ಮು.ಮಾ.7 ಡ್ರ್ಯಾಗರನ್ನು ತೆಗೆದು ಹಾಜರುಪಡಿಸಿ, ಕೃತ್ಯಕ್ಕೆ ಬಳಸಿದ್ದು ಎಂದು ಹೇಳಿದರು ಎಂದರೆ ಸರಿಯಲ್ಲ. ಲಾಂಗ್‌ನ ತುದಿಯಲ್ಲಿ ರಕ್ತದ ಕಲೆ ಇತ್ತು, ಅದೇ ಡ್ರ್ಯಾಗರ್ ನಲ್ಲಿ ಕೂಡ ರಕ್ತದ ಕಲೆ ಇತ್ತು ಎಂದರೆ ಸರಿಯಲ್ಲ. ಬಳಿಕ ಪೊಲೀಸರು ಅದೇ ಸ್ಥಳದಲ್ಲಿ ಆ ಡ್ರ್ಯಾಗರ್ ಮತ್ತು ಲಾಂಗ್ ಅನ್ನು ಪ್ರತ್ಯೇಕ ಪ್ರತ್ಯೇಕ ಬಿಳಿಯ ಬಟ್ಟೆ ಚೀಲಗಳಲ್ಲಿ ಹಾಕಿ ಮೊಹರು ಮಾಡಿದರು ಎಂದರೆ ಸರಿಯಲ್ಲ. ಬಳಿಕ 11.45 ರಿಂದ 12.30 ಗಂಟೆವರೆಗೆ ಚಾಸಾ.21 ಮತ್ತು ಚಾಸಾ.22 ರವರ ಸಮಕ್ಷಮ ಮಹಜರು ಬರೆದು, ಫೋಟೋ ತೆಗೆದು ಮಹಜರಿಗೆ ನನ್ನ ಸಹಿ ಪಡೆದರು ಎಂದರೆ ಸಾಕ್ಷಿ ಸಹಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ 1 ಮತ್ತು 5 ರವರು ನನ್ನ ಸಮಕ್ಷಮ ಮು.ಮಾ.6 ಮತ್ತು ಮು.ಮಾ.7 ಅನ್ನು ತೆಗೆದು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ವಿವರವಾದ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ದಿನಾಂಕ 08.07.2019 ರ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ.26 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ 1 ನೇ ಆರೋಪಿ ನನಗೆ ಪರಿಚಯ ಇರುವುದರಿಂದ ಆತನ ಮಾತು ಕೇಳಿ ಎಲ್ಲಾ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.